





# ಬೇಸಿಗೆ ಹಣ್ಣುಗಳು

■ ಚಿತ್ರ– ಲೇಖನ:

**ಬೀರಣ್ಣ ನಾಯಕ ಮೊಗಟಾ**

**ಬೇ**ಸಿಗೆ ಶುರುವಾಯಿತೆಂದರೆ 'ಅನ್ನಕ್ಕಿಂತ ಹಣ್ಣು ಹುಡುಕುವದೇ ಸೂಕ್ತ' ಎನ್ನುವವರಿದ್ದಾರೆ. ಪೇಟೆಯ ಹಣ್ಣುಗಳು ಎಲ್ಲರ ಆರ್ಥಿಕ ಮಟ್ಟಕ್ಕೆ ನಿಲುಕದು. ಆದರೆ ಹಳ್ಳಿಗಳಲ್ಲಿ ಸಿಗುವ ಬೇಸಿಗೆ ಹಣ್ಣುಗಳಿಗೆ ಊರೇ ಮಾರುಕಟ್ಟೆ. ಕಾಡು, ಬೆಟ್ಟ, ಗುಡ್ಡಗಳಿರುವ ಮಲೆನಾಡಿನ ಊರುಗಳಲ್ಲಿ ಬೇಸಿಗೆ ಬಿಸಿ ತಣಿಸಲೆಂಬಂತೆ ವೈವಿಧ್ಯಮಯ ಹಣ್ಣುಗಳಿಗೆ ಬರವೇ ಇಲ್ಲ. ನಾಡ ಹಣ್ಣುಗಳು ಹಾಗೂ ಕಾಡ ಹಣ್ಣುಗಳು ಯಥೇಚ್ಛ ದೊರಕುತ್ತವೆ.

ನಾಡ ಹಣ್ಣುಗಳಲ್ಲಿ ಹಣ್ಣಿನ ರಾಜ ಎಂದೇ ಕರೆಯಲ್ಪಡುವ ಮಾವಿನ ಹಣ್ಣಿಗೆ ಮಾರುಹೋಗುವವರು ಹೆಚ್ಚು. ಈಗಿನ ಆಧುನಿಕ ತಳಿಗಳಿಗಿಂತಲೂ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುವ ದೇಶಿ ತಳಿಯ ಮಾವುಗಳಾದ ಗಿಡಗನಮನೆ, ಕರಿಇಸಾಡು, ಬಿಳಿಇಸಾಡು, ಬಕ್ಕೆ, ಮಗೆಮಾವು, ಬಾಳೆಮಾವು ಮುಂತಾದ ತಳಿಗಳ ಮಾವಿನ ಹಣ್ಣುಗಳಿಗೆ ಈ ಆಧುನಿಕ ತಳಿಗಳು ಸರಸಾಟಿಯಾಗಿ ನಿಲ್ಲಲು ಸಾಧ್ಯವೇ ಇಲ್ಲ. ಪರಿಸರಕ್ಕೆ ಪೂರಕವಾದ ಈ ಎಲ್ಲಾ ಮಾವಿನ ಹಣ್ಣುಗಳಲ್ಲಿಯೂ ವಿಶೇಷವಿದೆ. ಕಾರವಾರದ ಅಂಕೋಲೆಯ ಸುತ್ತಮುತ್ತಲಿನ ಹಳ್ಳಿಗಳಾದ

(8ನೇ ಪುಟ ನೋಡಿ)